## ದಿನಾಂಕ: 03/10/2020 ರ ನೋಡಲ್ ಅಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಂಖ್ಯೆ-140 ಚಾಮರಾಜಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮತ್ತು ಸದಸ್ಯರುಗಳ ವಿವರಗಳು:**

| ಕ್ರ ಸಂ. | ಅಧಿಕಾರಿ/ ನೌಕರರ ಹೆಸರು | ಪದನಾಮ |
|---|---|---|
| 1 | ಶ್ರೀಮತಿ. ಶಶಿಕಲಾ. ಎನ್ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ |
| 2 | ಶ್ರೀ. ಎಂ.ಎಸ್. ಉಮೇಶ್ | ಸಂಚಾಲಕರು ಮತ್ತು ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-140 |
| 3 | ಶ್ರೀ. ನರಸಿಂಹಯ್ಯ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ-140 |
| 4 | ಶ್ರೀ. ಚೇತನ್ ಕುಮಾರ್.ಕೆ.ವಿ | ಸಹಾಯಕ ಅಭಿಯಂತರರು (ಬೆಸ್ಕಾಂ) |
| 5 | ಶ್ರೀಮತಿ. ಅಶ್ವಿನಿ .ಟಿ.ಕೆ | ಘನತ್ಯಾಜ್ಯ ಪರಿವೀಕ್ಷಕರು |
| 6 | ಶ್ರೀ. ಮೂರ್ತಿ .ಎನ್ | ಸ್ಯಾನಿಟರಿ ದಫೇದಾರ್ |
| 7 | ಶ್ರೀ. ರಾಜಣ್ಣ | ಸ್ಯಾನಿಟರಿ ದಫೇದಾರ್ |
| 8 | ಶ್ರೀ. ಕೃಷ್ಣಪ್ಪ .ಕೆ.ಆರ್ | ಸ್ಯಾನಿಟರಿ ದಫೇದಾರ್ |
| 9 | ಶ್ರೀ. ರಮೇಶ್.ಎಸ್ | ಸ್ಯಾನಿಟರಿ ದಫೇದಾರ್ |
| 10 | ಶ್ರೀ ಮುದ್ದಯ್ಯ .ಎಂ | ಹಿರಿಯ ಮುಖಂಡರು |
| 11 | ಶ್ರೀ. ಸೋಮಶೇಖರ್ .ಕೆ.ಹೆಚ್ | ಸ್ಥಳೀಯ ನಾಗರಿಕರು |
| 12 | ಶ್ರೀ. ನಟರಾಜು | ಸ್ಥಳೀಯ ಮುಖಂಡರು |
| 13 | ಶ್ರೀ. ಗೋವಿಂದ .ಟಿ | ಸ್ಥಳೀಯ ನಾಗರಿಕರು |
| 14 | ಶ್ರೀ. ಸಂಜೀವ ಕುಮಾರ್ | ಸ್ಥಳೀಯ ನಾಗರಿಕರು |

1. ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ: 140 ರ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಪರಿಚಯದೊಂದಿಗೆ ವಿವರಿಸುತ್ತಾ ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

2. ವಾರ್ಡ್ ಸಮಿತಿ ಸಭೆಯಲ್ಲಿ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ವಾರ್ಡ್ ವ್ಯಾಪ್ತಿಯ ಜಲಮಂಡಳಿ, ಬೆಸ್ಕಾಂ, ಘನತ್ಯಾಜ್ಯ ವಿಲೇವಾರಿ, ಆರೋಗ್ಯ ಇಲಾಖೆ, ಕಂದಾಯ, ಕಾಮಗಾರಿ ಇಲಾಖೆಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಇರುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

3. ಮಕ್ಕಳಕೂಟ ಪಾರ್ಕ್‌ನಲ್ಲಿ ವಿದ್ಯುತ್ ಸಂಪರ್ಕ ಅಡಚಣೆಯಿಂದ ಪಾರ್ಕ್‌ನಲ್ಲಿ Walking ಮಾಡುವ ಸಾರ್ವಜನಿಕರಿಗೆ ಶೌಚಾಲಯ ನೀರಿನ ಅಭಾವ ಸಂಭವಿಸಿರುವ ಬಗ್ಗೆ ಸಭೆಯಲ್ಲಿ ತಿಳಿಸಲಾಯಿತು, ಇದಕ್ಕೆ ಅಧ್ಯಕ್ಷರು ವಿದ್ಯುತ್ ವಿಭಾಗ ವತಿಯಿಂದ ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

4. ಮಕ್ಕಳಕೂಟ ಪಾರ್ಕ್ ಸಮೀಪದಲ್ಲಿ ಬೀದಿ ದೀಪ Switch ನ್ನು Mannual ಮುಖಾಂತರ Operate ಮಾಡುತಿದ್ದು ಇದರಿಂದಾಗಿ ನಿಗದಿತ ಸಮಯದಲ್ಲಿ ಬೀದಿದೀಪವನ್ನು On/Off ಮಾಡಲು ಆಗುತ್ತಿಲ್ಲ ಎಂದು ಸಭೆಯಲ್ಲಿ ತಿಳಿಸಿ ಇದನ್ನು ವಿದ್ಯುತ್ ವಿಭಾಗ ವತಿಯಿಂದ Automatic Timer ಅಳವಡಿಸಲು ತೀರ್ಮಾನಿಸಲಾಯಿತು.

5. ವಾರ್ಡ್-140 ಚಾಮರಾಜಪೇಟೆ ವ್ಯಾಪ್ತಿಯಲ್ಲಿ ಶುದ್ಧ ನೀರಿನ ಘಟಕದ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರು ಕುಡಿಯುವ ನೀರನ್ನು ಉಪಯೋಗಿಸಲು ಅನುಕೂಲವಾಗುವಂತೆ ಕಾಮಗಾರಿಯನ್ನು ಆದ್ಯತೆ ಮೇರೆಗೆ ತುರ್ತಾಗಿ ಅಗತ್ಯ ಕ್ರಮಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

Scanned by CamScanner

6. ವಾರ್ಡಿನ ಮುಖ್ಯರಸ್ತೆಯಲ್ಲಿ ಮಳೆಗಾಲದಿಂದ ಹೊಸದಾಗಿ ಗುರುತಿಸಿರುವ ರಸ್ತೆ ಗುಂಡಿಗಳನ್ನು ಜಲಮಂಡಳಿ ಅಗೆತಗಳು ಹಾಗೂ ಇನ್ನಿತರ ಅಗೆತಗಳಿಗೆ ಸಂಬಂಧಪಟ್ಟಿರುವುದರಿಂದ ರಸ್ತೆ ಗುಂಡಿಗಳನ್ನು ಮುಚ್ಚಲು ಅಗತ್ಯ ಕ್ರಮಕೈಗೊಳ್ಳುವ ಬಗ್ಗೆ ಅಧ್ಯಕ್ಷರು ರವರು ತುರ್ತಾಗಿ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.

7. ವಾರ್ಡ್-140 ವ್ಯಾಪ್ತಿಯ ಕೆಂಪಾಂಬುದಿ ಕೆರೆಯ ಪಕ್ಕದ ರಸ್ತೆ ಬದಿಯಲ್ಲಿ ಅನಧೀಕೃತವಾಗಿ ಘನತ್ಯಾಜ್ಯವನ್ನು ಮತ್ತು Debris ಸುರಿಯುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಈ ವಿಷಯದ ಬಗ್ಗೆ ಅಧ್ಯಕ್ಷರು ಪೊಲೀಸ್ ಇಲಾಖೆಗೆ ಪತ್ರ ಮುಖೇನ ಈ ಪ್ರದೇಶದಲ್ಲಿ ಹೆಚ್ಚುವರಿಯಾಗಿ ರಾತ್ರಿ ಸಮಯದಲ್ಲಿ ಗಸ್ತು ತಿರುಗಲು ಕ್ರಮವಹಿಸಲು ತಿಳಿಸಲಾಯಿತು ಮತ್ತು ರಸ್ತೆ ಬದಿಯಲ್ಲಿ ಹೆಚ್ಚುವರಿಯಾಗಿ ವಿದ್ಯುತ್ ವಿಭಾಗದಿಂದ ಬೀದಿದೀಪಗಳನ್ನು ಅಳವಡಿಸುವಂತೆ ಕ್ರಮವಹಿಸಲು ಸೂಚಿಸಲಾಯಿತು. ಹಾಗೂ ಈ ರಸ್ತೆ ಬದಿಯಲ್ಲಿ ತ್ಯಾಜ್ಯ ಸಂಗ್ರಹಣೆ ತಡೆಗಟ್ಟಲು ಸಮಿತಿ ಸದಸ್ಯರು, RWA ಒಟ್ಟಾಗಿ ಹೊಸದಾಗಿ ಯೋಜನೆ ರೂಪಿಸಿ ಕಾರ್ಯಾಚರಣೆ ನಡೆಸಲು ಕ್ರಮವಹಿಸುವಂತೆ ತೀರ್ಮಾನಿಸಲಾಯಿತು.

ಮೇಲ್ಕಂಡ ಎಲ್ಲಾ ವಿಷಯಗಳೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು
ಸಹಾಯಕ ಅಭಿಯಂತರರು

ಅಧ್ಯಕ್ಷರು &
ನೋಡಲ್ ಅಧಿಕಾರಿ

Scanned by CamScanner